**<u>ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ ನ್ಯಾಯಾಲಯ</u>**

**<u>ಕೆ.ಆರ್.ನಗರ</u>**

**<u>ಸಿ.ಸಿ. 127/2022</u>**

**<u>ಪಿಡಬ್ಲೂ-8</u>**

**<u>ಸಿಡಬ್ಲೂ-9</u>**

| | | |
|---|---|---|
| ಸಾಕ್ಷಿದಾರರ ಹೆಸರು | - | ಧನಂಜಯ |
| ತಂದೆಯ ಹೆಸರು | - | ಸುಬ್ಬೇಗೌಡ |
| ವಯಸ್ಸು | - | 47 ವರ್ಷ |
| ಕೆಲಸ | - | ಪೋಲೀಸ್ ಮುಖ್ಯಪೇದೆ<br>ಇಲವಾಲ ಪೊಲೀಸ್ ಠಾಣೆ |
| ವಾಸ | - | ಇಲವಾಲ |

**<u>ದಿನಾಂಕ 25.07.2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋದಿಸಲಾಯಿತು.</u>**

**<u>ಮುಖ್ಯ ವಿಚಾರಣೆ ಮಾನ್ಯ ಎಪಿಪಿಯವರಿಂದ</u>**

2019 ರಿಂದ 2026 ವರಗೆ ಕೆ ಆರ್ ನಗರ ಪೋಲೀಸ್ ಠಾಣೆಯಲ್ಲಿ ನಾನು ಮುಖ್ಯಪೇದೆಯಾಗಿ ಕಾರ್ಯನಿರ್ವಹಿಸಿರುತ್ತೇನೆ.

ನಾನು ಈ ಪ್ರಕರಣದಲ್ಲಿ ಚಾಸಾ 10 ರವರ ತನಿಖಾ ಸಹಾಯಕನಾಗಿ ಕೆಲಸ ಮಾಡಿರುತ್ತೇನೆ.

ದಿಃ05.10.2021 ರಂದು ಕೃತ್ಯ ನಡೆದ ಸ್ಥಳಕ್ಕೆ ತೆರಳಿ ಚಾಸಾ 10 ರವರ ನಿರ್ದೇಶನದನ್ವಯ ನನ್ನ ಸ್ವಹಸ್ತಾಕ್ಷರದಿಂದ ಪಂಚನಾಮೆಯನ್ನು ಚುಂಚನಕಟ್ಟೆ ಗ್ರಾಮದಲ್ಲಿರುವ ಕರ್ನಾಟಕ ಗ್ರಾಮಿಾಣಾ ಬ್ಯಾಂಕ್‌ನ ಒಳಗೆ ಪಂಚಾಯಿತಿದಾರರಾದ

ಚಾಸಾ 6 ಮತ್ತು 7 ರವರ ಸಮಕ್ಷಮ ಬೆಳಿಗ್ಗೆ 11.00 ರಿಂದ 11.30 ರವರೆಗೆ ಬರೆದಿರುತ್ತೇನೆ. ಸದರಿ ಸ್ಥಳವನ್ನು ಚಾಸಾ 1 ರವರು ತೋರಿಸಿರುತ್ತಾರೆ.

ದಿಃ 11.10.2021 ಆರೋಪಿ ತೋರಿಸಿದ ಸ್ಥಳದ ಮಹಜರನ್ನೂ ಸಹ ಬರೆದಿರುತ್ತೇನೆ.

ದಿಃ11.10.2021 ರಂದು ಚುಂಚನಕಟ್ಟೆ ಗ್ರಾಮದ ಕರ್ನಾಟಕ ಗ್ರಾಮೀಣಾ ಬ್ಯಾಂಕ್‌ನ ಒಳಗೆ ಪಂಚಾಯಿತಿದಾರರಾದ ಚಾಸಾ 2 ಮತ್ತು 3 ರವರ ಸಮಕ್ಷಮ ಆರೋಪಿ ತೋರಿಸಿದ ಸ್ಥಳದಲ್ಲಿ ಮದ್ಯಾಹ್ನ 12.45 ರಿಂದ 1.45 ರವರೆಗೆ ಪಂಚನಾಮೆಯನ್ನು ಬರೆದಿರುತ್ತೇನೆ.

ಅದೇ ಎರಡೂ ಪಂಚನಾಮೆಗಳಿಗೂ ಸಹ ನಾನು ಸಹಿ ಮಾಡಿರುತ್ತೇನೆ. ಸಾಕ್ಷಿಗೆ ನಿಪಿ 1 ಮತ್ತು 3 ದಾಖಲೆಗಳನ್ನು ತೋರಿಸಿ ಅವುಗಳನ್ನು ಸಾಕ್ಷಿನೋಡಿ ಗುರುತಿಸಿದ್ದು ಅವುಗಳನ್ನು ಈಗಾಗಲೇ ನಿಶಾನೆಗಳನ್ನಾಗಿ ಗುರುತಿಸಿದ್ದರಿಂದ ಸಾಕ್ಷಿಯ ಸಹಿಯನ್ನು ನಿಪಿ 1 (ಸಿ) ಮತ್ತು 3 (ಡಿ) ಎಂದು ಗುರುತಿಸಲಾಯಿತು. ನ್ಯಾಯಾಲಯದ ಮುಂದಿರುವ ಆರೋಪಿಯನ್ನು ಸಾಕ್ಷಿ ನೋಡಿ ಗುರುತಿಸಿರುತ್ತಾರೆ.

**ಪಾಟೀ ಸವಾಲು: ಆರೋಪಿ ಪರ ವಕೀಲರುಃ**

ನಾವು ಬ್ಯಾಂಕಿಗೆ ತೆರಳಿದ ಸಮಯದಲ್ಲಿ ಬ್ಯಾಂಕಿನ ವ್ಯವಹಾರಗಳು ನಡೆಯುತ್ತಿತ್ತು. ಬ್ಯಾಂಕಿನ ಒಳಗಡೆ ಪಂಚನಾಮೆಯನ್ನು ಮಾಡಲು ವ್ಯವಸ್ಥಾಪಕರ ಅನುಮತಿ ಪಡೆದಿಲ್ಲ. ಸ್ಥಳದಲ್ಲಿ ಬ್ಯಾಂಕಿನ ಸಿಬ್ಬಂದಿಗಳು ಹಾಜರಿದ್ದರು. ವ್ಯವಸ್ಥಾಪಕರು ಸ್ಥಳದಲ್ಲಿ ಇದ್ದರೋ ಇಲ್ಲವೋ ಗೊತ್ತಿಲ್ಲ. ಬ್ಯಾಂಕಿನ ಸಿಬ್ಬಂದಿಯ ಸಹಿಗಳನ್ನು ಪಂಚನಾಮೆಗೆ ಪಡೆದಿಲ್ಲ. ನಾವು ಪಂಚನಾಮ ಮಾಡಿದ ಕಾಲದಲ್ಲಿ ಸದರಿ ಬ್ಯಾಂಕಿನಲ್ಲಿ ಸಿಸಿ ಟಿವಿ ಕ್ಯಾಮೆರಾಗಳನ್ನು ಅಳವಡಿಸಿದ್ದರು. ಸದರಿ ಪಂಚನಾಮೆಯಲ್ಲಿ ಸದರಿ ಸಿಸಿ ಟಿವಿ ದೃಶ್ಯಾವಳಿ ಕುರಿತಾಗಿ ನಮೂದು ಮಾಡಿಲ್ಲ.

ಚಾಸಾ 6 ಮತ್ತು 7 ರವರಿಗೆ ನೋಟೀಸನ್ನು ನೀಡಿದ್ದಾಗಿ ಪಂಚನಾಮೆಯಲ್ಲಿ ಬರೆದಿಲ್ಲ. ನಿಪಿ 3 ನ್ನು ಪ್ರಕರಣಕ್ಕೆ ಪೂರಕವಾಗಿ ಪೊಲೀಸ್ ಠಾಣೆಯಲ್ಲಿ ತಯಾರಿಸಿದ್ದೇವೆ ಎಂದರೆ ಸರಿಯಲ್ಲ. ಸ್ಥಳದಲ್ಲಿ ತೆರಳಿ ಪಂಚನಾಮೆಯನ್ನು ಮಾಡಿದ್ದ ಪಕ್ಷದಲ್ಲಿ ಸಿಸಿ ಟಿವಿ ದೃಶ್ಯಾವಳಿಗಳನ್ನು ಪರೀಕ್ಷೆಯನ್ನು ಮಾಡಬೇಕಿತ್ತು. ಅಲ್ಲಿಗೆ ತೆರಳದ ಕಾರಣ ಠಾಣೆಯಲ್ಲಿಯೇ ಮಾಡಿಕೊಂಡಿರುತ್ತೇವೆ ಎಂದರೆ ಸರಿಯಲ್ಲ. ನಾವು ಸ್ಥಳಕ್ಕೆ ಹೋಗದ

ಕಾರಣ ಯಾವುದೇ ಬ್ಯಾಂಕಿನ ಸಿಬ್ಬಂದಿಗಳ ಅಥವಾ ಅಧಿಕಾರಿಗಳ ಸಹಿ ಪಡೆದಿಲ್ಲ ಎಂದರೆ ಸರಿಯಲ್ಲ.

ಚಾಸಾ 7 ರವರು ಮುದುಗುಪ್ಪೆ ಗ್ರಾಮದವರು ಎಂದರೆ ಸರಿ. ಚಾಸಾ 7 ರವರನ್ನು ಕರೆದುಕೊಂಡು ಹೋಗಿ ಪಂಚನಾಮೆಗೆ ಸಹಿ ಪಡೆಯುವ ಅಗತ್ಯವಿರಲಿಲ್ಲ ಎಂದರೆ ಸರಿಯಲ್ಲ. ಚಾಸಾ 6 ಮತ್ತು 7 ರವರ ಸಹಿಗಳನ್ನು ಸಹ ಪೊಲೀಸ್ ಠಾಣೆಯಲ್ಲಿಯೇ ಪ್ರಭಾವ ಬೀರಿ ಪಡೆದುಕೊಂಡಿರುತ್ತೇವೆ ಎಂದರೆ ಸರಿಯಲ್ಲ. ಚುಂಚನಕಟ್ಟೆ ಗ್ರಾಮಕ್ಕೆ ನೇಮಕಗೊಂಡ ಸಿಬ್ಬಂದಿ ಗಸ್ತು ಮಾಡುತ್ತಾರೆ ಎಂದರೆ ಸರಿ. ನನಗೆ ಘಟನಾ ಸ್ಥಳದ ಪರಿಚಯ ಮತ್ತು ಮಾಹಿತಿ ಇರುವ ಕಾರಣ ಅದರ ಆಧಾರದ ಮೇಲೆಯೇ ಪೊಲೀಸ್ ಠಾಣೆಯಲ್ಲಿಯೇ ಬರೆದಿರುತ್ತೇನೆ ಎಂದರೆ ಸರಿಯಲ್ಲ. ಸದರಿ ದಿನ ನಿಪಿ 3 ನ್ನು ಬರೆಯುವ ಕಾಲದಲ್ಲಿ ಆರೋಪಿಯನ್ನು ಸ್ಥಳಕ್ಕೆ ಕರೆದುಕೊಂಡು ಹೋಗಿಲ್ಲ. ನಿಪಿ 1 ಮತ್ತು 3 ನ್ನು ಪ್ರತ್ಯೇಕವಾಗಿ ಬೇರೆ ಬೇರೆ ದಿನ ಮಾಡಿರುತ್ತೇವೆ. ಆರೋಪಿ ನಾನು ಹೇಳಿದಂತೆ ಯಾವುದೇ ಕೃತ್ಯ ಸ್ಥಳವನ್ನು ತೋರಿಸದೇ ಇದ್ದರೂ ಸಹ ನಿಪಿ 3 ನ್ನು ಪ್ರಕರಣವನ್ನು ಬಲಪಡಿಸುವ ಸಲುವಾಗಿ ಪೊಲೀಸ್ ಠಾಣೆಯಲ್ಲಿಯೇ ತಯಾರಿಸಿರುತ್ತೇವೆ ಎಂದರೆ ಸರಿಯಲ್ಲ.

ನಿಪಿ 1 ನ್ನು ರಚಿಸುವ ಕಾಲದಲ್ಲಿ ಯಾವುದೇ ವಸ್ತುಗಳನ್ನು ವಶಪಡಿಸಿಕೊಂಡಿಲ್ಲ. ಆರೋಪಿಗೂ ಈ ಪ್ರಕರಣಕ್ಕೂ ಯಾವುದೇ ಸಂಬಂದ ಇಲ್ಲದೇ ಇದ್ದರೂ ಸಹ ಮೇಲಾಧಿಕಾರಿಗಳ ಮಾತನ್ನು ಕೇಳಿ ಸುಳ್ಳು ದಾಖಲೆಗಳನ್ನು ಸೃಷ್ಟಿ ಮಾಡಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ - ಇರುವುದಿಲ್ಲ

**(ನನ್ನ ಉಕ್ತ ಲೇಖನದ ಮೇರೆಗೆ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)**

ಓ ಹೇ ಕೇ ಸ ಇದೆ ಎಂ

**(ಚಂದನ್ ಎಸ್ )**
ಪ್ರಧಾನ ಸಿವಿಲ್ ನ್ಯಾಯಾಧೀಶರು,
ಮತ್ತು ಪ್ರದನ್ಯಾದಂ., ಕೆ.ಆರ್.ನಗರ

**<u>ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ ನ್ಯಾಯಾಲಯ</u>**

**<u>ಕೆ.ಆರ್.ನಗರ</u>**

**<u>ಸಿ.ಸಿ. 817/2017</u>**

**<u>ಪಿಡಬ್ಲೂ-7</u>**

**<u>ಸಿಡಬ್ಲೂ-9</u>**

| | | |
|---|---|---|
| ಸಾಕ್ಷಿದಾರರ ಹೆಸರು | - | ಷಣ್ಮುಗಮ |
| ತಂದೆಯ ಹೆಸರು | - | ಮಣಿ |
| ವಯಸ್ಸು | - | 39 ವರ್ಷ |
| ಕೆಲಸ | - | ಪೋಲೀಸ್ ನೀರಿಕ್ಷಕರು<br>ರಾಷ್ಟ್ರೀಯ ತನಿಖಾ ದಳ |
| ವಾಸ | - | ಬೆಂಗಳೂರು |

**<u>ದಿನಾಂಕ 04-04-2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋದಿಸಲಾಯಿತು.</u>**

**<u>ಮುಖ್ಯ ವಿಚಾರಣೆ ಮಾನ್ಯ ಎಪಿಪಿಯವರಿಂದ</u>**

ಆಗಸ್ಟ 2013 ರಿಂದ ಸೆಪ್ಟೆಂಬರ್ 2015 ವರಗೆ ಕೆ ಆರ್ ನಗರ ಪೋಲೀಸ್ ಉಪ ನಿರೀಕ್ಷಕನಾಗಿ ಕಾರ್ಯನಿರ್ವಹಿಸಿರುತ್ತೇನೆ.

ದಿಃ 14-01-2014 ರಂದು ಸಂಜೆ 8.00 ಗಂಟೆ ಸಮಯದಲ್ಲಿ ಚಾಸಾ 8 ರವರಿಂದ ಪ್ರಕರಣದ ಕಡತವನ್ನು ಪಡೆದುಕೊಂಡು ಪರಿಶೀಲನೆಯನ್ನು ಅದೇ ದಿನ ಚಾಸಾ 1 ಮತ್ತು 2 ರವರ ಗಾಯದ ಪ್ರಮಾಣ ಪತ್ರಗಳನ್ನು ಚಾಸಾ 7 ರವರ ಕಡೆಯಿಂದ ಪಡೆದುಕೊಂಡಿರುತ್ತೇನೆ ಅದೇ ರೀತೀ ಚಾಸಾ 1 ಮತ್ತು 2 ರವರ ಗಾಯದ ಪ್ರಮಾಣ ಪತ್ರಗಳನ್ನು ನೋಡಿ ಗುರುತಿಸಿದ್ದು ಅವುಗಳನ್ನು ಈಗಾಗಲೇ ಕ್ರಮವಾಗಿ ನಿಪಿ 5 ಮತ್ತು 6 ಎಂದು ಗುರುತಿಸಲಾಗಿದ್ದು ಸಾಕಿಃ್ಷಯ ಸಹಿಯನ್ನು 5 ಬಿ ಮತ್ತು 6 ಬಿ ಎಂದು

ಗುರುತಿಸಲಾಯಿತು. ಸದರಿ ಗಾಯದ ಪ್ರಮಾಣ ಪತ್ರಗಳನ್ನು ಪರಿಶೀಲಿಸಿ ಕಡಕ್ಕೆ ಅಳವಡಿಸಿಕೊಂಡಿರುತ್ತೇನೆ. ನಂತರ ಆರೋಪಿತರ ವಿರುದ್ಧ ಆರೊಪ ಸಾಬೀತಾಗಿದ್ದರಿಂದ ಅಂತಿಮ ಆರೋಪಣಾ ಪಟ್ಟಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಿದ್ದೇನೆ.

**ಪಾಟೀ ಸವಾಲು: ಶ್ರೀ. ಎಚ್ ಕೆ ಸಿ ಆರೋಪಿ ಪರ ವಕೀಲರು:**

ಯಾವುದೇ ಸತ್ಯಾಸತ್ಯತೆಗಳನ್ನು ಪಿರಿಶಿಲನೆ ಮಾಡದೇ ಸುಳ್ಳು ಅಂತಿಮ ದೋಷಾ ರೊಪಪಣ ಪಟ್ಟಿಯನ್ನು ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ನಾನು ಯಾವುದೇ ಸಾಕ್ಷಿಯ ಹೇಳಿಕೆಗಳನ್ನು ಪಡೆದುಕೂಂಡಿರುವುದಿಲ್ಲ ಎಂದರೆ ಸರಿ. ನಿಪಿ 5 ಮತ್ತು 6 ನ್ನು ನಾನು ಖುದ್ದಾಗಿ ಪಡೆದುಕೊಂಡಿರುವುದಿಲ್ಲ ಸಿಬ್ಬಂದಿಯವರಿಂದ ಪಡೆದುಕೊಂಡಿದ್ದೇನೆ ಎಂದರೆ ಸರಿ.

ಮರು ವಿಚಾರಣೆ - ಇರುವುದಿಲ್ಲ

**(ನನ್ನ ಉಕ್ತ ಲೇಖನದ ಮೇರೆಗೆ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)**

ಓ ಹೇ ಕೇ ಸ ಇದೆ ಎಂ

**(ಚಂದನ್ ಎಸ್ )**
ಪ್ರಧಾನ ಸಿವಿಲ್ ನ್ಯಾಯಾಧೀಶರು,
ಮತ್ತು ಪ್ರದನ್ಯಾದಂ.,

ಕೆ.ಆರ್.ನಗರ

**ಪ್ರಧಾನ  ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ ನ್ಯಾಯಾಲಯ**

**ಕೆ.ಆರ್.ನಗರ**

**ಸಿ.ಸಿ.    972/2017**

**ಪಿಡಬ್ಲೂ-9**

**ಸಿಡಬ್ಲೂ-22**

| | | |
|---|---|---|
| ಸಾಕ್ಷಿದಾರರ ಹೆಸರು | - | ಷಣ್ಮುಗಮ |
| ತಂದೆಯ ಹೆಸರು | - | ಮಣಿ |
| ವಯಸ್ಸು | - | 39 ವರ್ಷ |
| ಕೆಲಸ | - | ಪೋಲೀಸ್ ನೀರಿಕ್ಷಕರು<br>ರಾಷ್ಟ್ರೀಯ ತನಿಖಾ ದಳ |
| ವಾಸ | - | ಬೆಂಗಳೂರು |

**ದಿನಾಂಕ 27-07-2023 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆ ಮಾನ್ಯ ಎಪಿಪಿಯವರಿಂದ**

ಆಗಸ್ಟ 2013 ರಿಂದ ಸೆಪ್ಟೆಂಬರ್ 2015 ವರಗೆ  ಕೆ ಆರ್ ನಗರ  ಪೋಲೀಸ್ ಉಪ ನಿರೀಕ್ಷಕನಾಗಿ ಕಾರ್ಯನಿರ್ವಹಿಸಿರುತ್ತೇನೆ.

ದಿಃ 04-06-2015  ರಂದು ಸಂಜೆ 8.00 ಗಂಟೆ ಸಮಯದಲ್ಲಿ  ಚಾಸಾ 1 ರವರು ಠಾಣೆಗೆ ಹಾಜರಾಗಿ ನೀಡಿದ ದೂರನ್ನು ಸ್ವಿಕರಿಸಿ ಠಾಣಾ ಮೊಕದ್ದಮೆ ಸಂಖ್ಯೆ 215/2015 ರಲ್ಲಿ  ಮೊಕದ್ದಮೆಯನ್ನು  ಭಾರತೀಯ ದಂಡ ಸಂಹಿತೆ ಕಲಂ 279, 337 ರಲ್ಲಿ ಪ್ರಕರಣವನ್ನು ದಾಖಲಿಸಿಕೊಂಡು ಪ್ರಥಮ ವರ್ತಮಾನ ವರದಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಿರುತೇತನೆ.  ಸಾಕ್ಷಿ  ನಿಪಿ 1 ರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ 1 ಬಿ ಎಂದು ಗುರುತಿಸಲಾಯಿತು. ಅದೇ ರೀತೀ ಸಾಕ್ಷಿ ಪ್ರಥಮ ವರ್ತಮಾನ

ವರದಿಯನ್ನು ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ನಿಪಿ 14 ಎಂದು ಗುರುತಿಸಲಾಯಿತು ಸಾಕಿಃ್ಷಯ ಸಹಿಯನ್ನು 14 ಎ ಎಂದು ಗುರುತಿಸಲಾಯಿತು. ಅದೇ ದಿನ ನಾನು ಕೃತ್ಯ ನಡೆದ ಸ್ಥಳಕ್ಕೆ ಹೋಗಿ ಚಾಸಾ 2 ರವರು ಕೃತ್ಯ ನಡೆದ ಸ್ಥಳ ವನ್ನು ತೋರಿಸಿದ್ದು ಚಾಸಾ 6 ಮತ್ತು 7 ರವರ ಸಮಕ್ಷಮ ರಾತ್ರಿ 8.45 ರಿಂದ 9.45 ವರಗೆ ಕೃತ್ಯ ನಡೆದ ಸ್ಥಳದ ಪಂಚನಾಮೆಯನಉ ಜರುಗಿಸಿರುತ್ತೇನೆ. ಅದೇ ಸಮಯದಲ್ಲಿ ಚಾಸಾ 6 ಮತ್ತು 7 ರ ಸಮಕ್ಷಮ ಅಪಘಾತಕ್ಕೆ ಒಳಗಾದ ವಾಹನ ಸಂಖ್ಯೆ ಕೆ ಎಸ್ ಆರ್ ಟಿ ಸಿ ಸಂಖ್ಯೆ ಕೆಎ 09 ಎಫ್ 3281 ಬಸ್ಸನ್ನು ಅಮಾನತು ಪಡಿಸಿಕೊಂಡಿದ್ದೇನೆ. ಸಾಕ್ಷಿ ಪಂಚನಾಮೆಯನ್ನು ನೊಡೀ ಗುರುಸಿದ್ದು ಅದನ್ನು ಈಗಾಗಲೇ ನಿಪಿ 4 ಎಂದು ಗುರುತಿದ್ದು ಸಾಕ್ಷಿಯ ಸಹಿಯನಲ್ನು ನಿಪಿ 4 ಎ ಎಂದು ಗುರುತಿಸಲಾಯಿತು. ಸಾಕ್ಷಿ ಮೇಲೆ ಹೇಳಿದ ಅಮಾನತು ಪಡಿಸಿಕೊಂಡು ಬಸ್ಸನ್ನು ನೊಡಿ ಗುರುತಿಸಿದ್ದು,ಸದರಿ ಭಾವತಚಿತ್ರಕ್ಕೆ ಹೊಂದಿಕೊಂಡ ಯಾವುದೇ ಸಿ ಡಿ ಇಲ್ಲದ ಕಾರಣ ನಿಶಾನೆಯಾಗಿ ಗುರುತಿಸಿರುವುದಿಲ್ಲ.

ಅದೇ ರೀತಿ ಸದರಿ ದಿನ ಸ್ಥಳದಲ್ಲಿ ಕೃತ್ಯ ನಡೆದ ಕೃತ್ಯದ ಘಟನೆಯ ನಕ್ಷ್ಯಯನ್ನು ಸ್ಥ.,ಳದಲ್ಲಿ ಚಾಸಾ 6 ಮತ್ತು 7 ರ ಸಮಕ್ಷಮ ತಯಾರಿಸಿರುತ್ತೇನೆ. ಸಾಕ್ಷಿಯು ನಕ್ಷೆಯನ್ನು ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ನಿಪಿ 5 ಎಂದು ಗುರುತಿದ್ದು ಸಾಕ್ಷಿಯ ಸಹಿಯನ್ನು ನಿಪಿ 5 ಸಿ ಎಂದು ಗುರುತಿಸಲಾಯಿತು.

ದಿಃ 05-06-2015 ರಂದು ಪ್ರಕರಣದಲ್ಲಿ ಗಾಯಾಳು ಮೃತ ಪಟ್ಟಿರುವುದಾಗಿ ಮೈಸೂರಿನ ಕೆ ಆರ್ ಆಸ್ಪತ್ರೆ ಯಿಂದ ನನಗೆ ಮಾಹಿತಿ ಬಂದಿದ್ದು ಪ್ರಕರಣದಲ್ಲಿ ಕಲಂ ನಂ. 304(ಎ) ನ್ನು ಅಳವಡಿಸಿಕೊಂಡು ತನಿಖೆಯನ್ನು ನಡೆಸಲು ನ್ಯಾಯಾಲಯಕ್ಕೆ ಅನುಮತಿಗಾಗಿ ಅರ್ಜಿ ಸಲ್ಲಿಸಿದ್ದು ನ್ಯಾಯಾಲಯದ ಆದೇಶದ ನಂತರ ಪ್ರಕರಣಕ್ಕೆ ಭಾರತೀಯ ದಂಡ ಸಂಹಿತೆ ಕಲಂ 304(ಎ) ನ್ನು ಅಳವಡಿಸಿಕೊಂಡು ತನಿಖೆಯನ್ನು ಕೈಗೊಂಡಿರುತ್ತೇನೆ. ಪ್ರಕರಣದ ಮೃತ ವ್ಯಕ್ತಿಯ ಶವ ಪಂಚನಾಮೆಯನ್ನು ಚಾಸಾ 20 ಮತ್ತು 21 ನ್ನು ರವರನ್ನು ನೇಮಕ ಮಾಡಿರುತ್ತೇನೆ. ನಂತರ ಅದೇ ದಿನ ಸಂಜೆ ಚಾಸಾ 21 ರವರು ಠಾಣೆಗೆ ಬಂದು ಶವ ಪಂಚನಾಮೆಯನ್ನು ಕೈಗೊಂಡ ವರದಿಯನ್ನು ಮತ್ತು ಮೃತ ವ್ಯಕ್ತಿ ಧರಿಸಿದ ಬಟ್ಟೆಗಳನ್ನು ಹಾಜರು ಪಡಿಸಿದ್ದು ಅವುಗಳನ್ನು ಪಡೆದುಕೊಂಡಿರುತ್ತೇನೆ ಸಾಕ್ಷಿ

ಸದರಿ ಬಟ್ಟೆಗಳನ್ನು ನೋಡಿ ಗುರುತಿಸಿರುತ್ತಾರೆ ಅವುಗಳನ್ನು ಈಗಾಗಲೇ ಎಮ್ ಎ 1 ಎಂದು ಗುರುತಿಸಿಲಾಗಿದೆ. ನಂತರ ಸದರಿ ಪ್ರಕರಣವು ಘೋರ ವಾದ ಪ್ರಕರಣವಾದ ಕಾರಣ ಮುಂದಿನ ತನಿಖೆಗಾಗಿ ಚಾಸಾ 23 ರವರಿಗೆ ನೀಡಿರುತ್ತೇನೆ.

**ಪಾಟೀ ಸವಾಲು: ಶ್ರೀ. ಕೆ ಎನ್ ಎಸ್ ಆರೋಪಿ ಪರ ವಕೀಲರುಃ**

ನಾನು ಮೊದಲು ಪ್ರಥಮ ವರ್ತಮಾನ ವರದಿಯನ್ನು ಮಾಡಿದ ನಂತರ ಸ್ಥಳ ಪಂಚನಾಮೆಯನ್ನು ಮಾಡಿರುತ್ತೇನೆ. ನಾನು ಅಪಘಾತವಾದ ನಂತರ 09 ಗಂಟೆಯ ನಂತರ ಸ್ಥಳಕ್ಕೆ ಹೋಗಿರುತ್ತೇನೆ. ಸದರಿ ಅಪಘಾತವಾದ ಸ್ಥಳ ಕ್ಕೆ ಹೋದಾಗ ಚಾಸಾ 2 ರವರನ್ನು ಬಿಟ್ಟು ಬೇರೆ ಯಾರು ಸಹ ಅಪಘಾತವನ್ನು ಕಣ್ಣಾರೆ ಕಂಡ ಸಾಕ್ಷಿಗಳು ಇರಲಿಲ್ಲ.

ನಿಪಿ 5 ರ ಪ್ರಕಾರ ಮೃತ ವ್ಯಕ್ತಿ ಸದರಿ ದಿನ ಟಾರ್ ರಸ್ತೆಯ ಮೇಲೆ 3 ಅಡಿ ಜಾಗದಲ್ಲಿ ಅಫಘಾವಾಗಿದೆ ಎಂದರೆ ಸರಿ. ಸದರಿ ಅಪಘಾತದ ಸ್ಥಳದಲ್ಲಿ ಪಾದಾಚಾರಿಗಳು ನಡೆದುಕೊಂಡು ಹೋಗಲು 8 ಅಡಿ ಪಾದಾಚಾರಿ ಮಾರ್ಗ ಇದೆ ಎಂದರೆ ಸರಿ. ಹಾಗಾಗಿ ಪಾದಾಚಾರಿಗಳು 8 ಅಡಿ ಪಾದಾಚಾರಿ ಮಾರ್ಗದಲ್ಲಿ ನಡೆಯಬೇಕು ಹಾಗೂ ರಸ್ತೆಯಲ್ಲಿ ಬರಬಾರದು ಎಂದರೆ ಸರಿ. ಹಾಗಾಗಿ ಪಾದಾಚಾರಿಯು ಫುಟ್ ಪಾತನ್ನು ಬಿಟ್ಟು ರಸ್ತೆಗೆ ಬಂದಿದ್ದುರಿಂದ ಅಪಘಾತವಾಗಿದೆ ಎಂದರೆ ಸರಿ.

ನಾನು ಸ್ಥಳದಲ್ಲಿ ಯಾವುದೇ ಸ್ಥಳ ಪಂಚನಾಮೆಯನ್ನು ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಯಾವುದೇ ಪ್ರತ್ಯಕ್ಷ ಸಾಕ್ಷಿದಾರರ ಹೇಳಿಕೆಯನ್ನು ಪಡೆದು ಕೊಂಡಿರುವುದದಿಲ್ಲ ಎಂದರೆ ಸರಿ. ಮೃತ ವ್ಯಕ್ತಿಗೆ ಅಂದಾಜು 70 ವರ್ಷ ಎಂದರೆ ಸರಿಯಲ್ಲ. ಸಾಕ್ಷಿ 65 ವರ್ಷ ಎಂದು ತಿಳಿಸಿರುತ್ತಾರೆ. ಹಾಗಾಗಿ ಸದರಿ ಅಫಪಾತವು ಆರೋಪಿಯ ತಪ್ಪಿನಿಂದ ಆಗಿರುವುದಿಲ್ಲ ಪಾದಾಚಾರಿಯ ರಸ್ತೆ ಅಜಾಗರೂಕತೆಯಿಂದ ದಾಟಿರುವುದರಿಂದ ಸದರಿ ಅಪಘಾತ ಸಂಬವಿಸಿರುತ್ತದೆ ಎಂದರೆ ಸರಿಯಲ್ಲ .

ಮರು ವಿಚಾರಣೆ - ಇರುವುದಿಲ್ಲ

(ನನ್ನ ಉಕ್ತ ಲೇಖನದ ಮೇರೆಗೆ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ ಹೇ ಕೇ ಸ ಇದೆ ಎಂ

**(ಚಂದನ್ ಎಸ್ )**
ಪ್ರಧಾನ ಸಿವಿಲ್ ನ್ಯಾಯಾಧೀಶರು,
ಮತ್ತು ಪ್ರದನ್ಯಾದಂ., ಕೆ.ಆರ್.ನಗರ